

# ಗಾನವಿ ಪ್ರಕೃತಿ ಗಾನ

ನಟನೆ ಜೊತೆಗೆ ಆಗಾಗ್ಗೆ ಪ್ರವಾಸವನ್ನೂ ಮಾಡುವುದೆಂದರೆ ಬಲು ಖುಷಿ ಎನ್ನುವ ನಟಿ ಗಾನವಿ ಲಕ್ಷ್ಮಣ್, ಈಚೆಗೆ ಚಿಕ್ಕಮಗಳೂರಿನ ನೇತ್ರಾವತಿಗೆ ಟ್ರೆಕ್ ಹೋಗಿ ಬಂದಿದ್ದಾರೆ. ಮಳೆಯಲ್ಲಿ ಮಿಂದ ಪ್ರಕೃತಿಯ ನಡುವೆ ತಾವು ತಲ್ಲೀನರಾದ ಅನುಭವವನ್ನು ಸಂತೋಷದಿಂದ ಹಂಚಿಕೊಂಡಿದ್ದಾರೆ.

ಶೂಟಿಂಗ್ ನಡುವೆ ಬ್ಯುಸಿಯಾಗಿರುವ ಅವರು, ಚಿಕ್ಕಮಗಳೂರಿನ ಮುತ್ತೋಡಿ ಸಮೀಪದ ತಮ್ಮ ಊರಿಗೆ ಹೋಗಿದ್ದ ಸಮಯದಲ್ಲೇ ಟ್ರೆಕ್ಕಿಂಗ್ ಮಾಡಿದ್ದಾರೆ. ಈ ಬಗ್ಗೆ ಮಾತನಾಡುತ್ತಾ, 'ಟ್ರೆಕ್‌ಗೂ ಮೊದಲು ಶೂಟಿಂಗ್‌ನಲ್ಲಿ ಕಳೆದುಹೋಗಿದ್ದೆ. ನಗರ ಜೀವನದ ಜಂಜಡದಲ್ಲಿ ನನ್ನನ್ನು ನಾನು ಮರೆತೇ ಹೋಗಿದ್ದೆ. ಹೀಗಾಗಿ ಪ್ರಕೃತಿಯಿಂದಲೂ ಸಂಪರ್ಕ ಕಳೆದುಕೊಂಡಿದ್ದೆ. ಟ್ರೆಕ್ಕಿಂಗ್ ಅವೆಲ್ಲವನ್ನೂ ಮರಳಿ ನೀಡಿದೆ' ಎಂದು ಉತ್ಸುಕರಾಗಿ ಮಾತನಾಡಿದ್ದಾರೆ.

> 'ಪ್ರಕೃತಿಯ ಮಡಿಲಿಗೆ ಮರಳಲು ಮಳೆಗಾಲ ಅತ್ಯುತ್ತಮ ಸಮಯ. ಸಣ್ಣ ಪ್ರವಾಸವೂ ನಮ್ಮನ್ನು ನಾವು ಮರುಶೋಧಿಸಿಕೊಳ್ಳಲು ಸಹಾಯ ಮಾಡುತ್ತದೆ'

'ಪ್ರಕೃತಿಯ ಮಡಿಲಿಗೆ ಮರಳಲು ಮಳೆಗಾಲ ಅತಿ ಒಳ್ಳೆಯ ಸಮಯ. ಸಣ್ಣ ಪ್ರವಾಸವೂ ನಮ್ಮನ್ನು ನಾವು ಮರುಶೋಧಿಸಿಕೊಳ್ಳಲು ಸಹಾಯ ಮಾಡುತ್ತದೆ. ನಾವೆಷ್ಟು ಸಣ್ಣವರು ಎಂಬುದನ್ನು ಮತ್ತೆ ಮತ್ತೆ ಮನದಟ್ಟು ಮಾಡುತ್ತದೆ. ಮನಸ್ಸು, ಮೆದುಳಿನ ಕಲ್ಮಶವನ್ನು ತೊಡೆಯುವಂತೆ ಮಾಡುತ್ತದೆ. ಪ್ರಕೃತಿಗೆ ಎಲ್ಲರೂ ಒಂದೇ. ಅದೇ ನಿಸರ್ಗದ ನಿಜ ಸೌಂದರ್ಯ ಕೂಡ. ಮಳೆಯಲ್ಲಿ ಮಿಂದ ನೆಲದಲ್ಲಿ ನಡೆವಾಗ ಎಡತಾಕಿದ ಸಣ್ಣಪುಟ್ಟ ಜಲಪಾತಗಳು, ಝರಿ ತೊರೆಗಳು, ಹಸುರು ತುಂಬಿದ ಹುಲ್ಲುಗಾವಲು, ಬೆಟ್ಟ ಗುಡ್ಡಗಳು, ಗಾಳಿಯ ನಾದ, ಹಕ್ಕಿಗಳ ಚಿಲಿಪಿಲಿ... ಇವೆಲ್ಲವೂ ನನ್ನನ್ನು ಪ್ರಕೃತಿಯ ಮಡಿಲಲ್ಲಿ ಮಿಂದೇಳುವಂತೆ ಮಾಡಿದವು' ಎಂದು ಭಾವುಕರಾಗಿದ್ದಾರೆ.

ಇಂಥದ್ದೊಂದು ಪ್ರವಾಸ ತಮಗೆ 'ನಿಸರ್ಗ ಚಿಕಿತ್ಸೆ'ಯಿದ್ದಂತೆ ಎನ್ನುವ ಅವರು, 'ಈ ನಡೆದಾಟದಲ್ಲಿ ನೋವನ್ನು ಶಮನ ಮಾಡುವ, ಮನಸ್ಸನ್ನು ಹಗುರಗೊಳಿಸುವ ಮಾಂತ್ರಿಕಶಕ್ತಿಯಿದೆ' ಎಂದಿದ್ದಾರೆ.

ಟ್ರೆಕ್ಕಿಂಗ್‌ನ ಸವಾಲಿನ ಬಗ್ಗೆಯೂ ಮಾತನಾಡುತ್ತಾ, 'ಟ್ರೆಕ್ ಮಾಡುವುದು ನನಗೆ ಸುಲಭವೇ. ಆದರೆ ಇಳಿಯುವುದು ಸವಾಲು. ಬೆಟ್ಟದ ಮೇಲೆ ಕೆಲ ಸಮಯ ಯೋಗ ಮಾಡಿದೆ. ಸ್ನೇಹಿತರೊಂದಿಗೆ ಒಳ್ಳೆಯ ಕಾಲ ಕಳೆದೆ. ಈ ಟ್ರೆಕ್ಕಿಂಗ್, ನನಗೆ ಸಿಕ್ಕ ಅತಿ ಆನಂದಮಯ ಅನುಭವ' ಎಂದು ಸಂತಸ ವ್ಯಕ್ತಪಡಿಸಿದ್ದಾರೆ.

# ಯಶ್ 'ಟಾಕ್ಸಿಕ್' ಲುಕ್!

ಕೆಜಿಎಫ್ ಸಿನಿಮಾದ ಭರ್ಜರಿ ಯಶಸ್ಸಿನ ನಂತರ ರಾಕಿಂಗ್ ಸ್ಟಾರ್ ಯಶ್, ತಮ್ಮ ಮುಂದಿನ ದೊಡ್ಡ ಬಜೆಟ್ ಸಿನಿಮಾ 'ಟಾಕ್ಸಿಕ್'ಗೆ ಕಸರತ್ತಿನಲ್ಲಿ ತೊಡಗಿಕೊಂಡಿದ್ದಾರೆ. ಈಗಾಗಲೇ ಚಿತ್ರೀಕರಣವೂ ಚಾಲನೆ ಪಡೆದಿದ್ದು, ಬೆಂಗಳೂರಿನಲ್ಲೂ ಇದರ ಚಿತ್ರೀಕರಣ ನಡೆದಿದೆ. ರಕ್ಷಣಾ ಕಾರ್ಯಾಚರಣೆಯ ದೃಶ್ಯವನ್ನು ನಗರದಲ್ಲಿಯೇ ಚಿತ್ರೀಕರಿಸಿರುವ ಮಾಹಿತಿಯಿದೆ.

ಈಚೆಗೆ ಭಿನ್ನ ಲುಕ್‌ನಲ್ಲಿ ಯಶ್ ಕಾಣಿಸಿಕೊಂಡಿರುವುದು ಅಭಿಮಾನಿಗಳ ಗಮನಸೆಳೆದಿದೆ. ಯಶ್ ಅವರಿಗೆ ಕೇಶ ವಿನ್ಯಾಸ ಮಾಡಿರುವ ಹೇರ್‌ಸ್ಟೈಲಿಸ್ಟ್ ಅಲೆಕ್ಸ್ ವಿಜಯ್‌ಕಾಂತ್, ಆ ಲುಕ್‌ನ ಫೋಟೊವನ್ನು ಹಂಚಿಕೊಂಡಿದ್ದಾರೆ.

'ಟಾಕ್ಸಿಕ್', ಗೋವಾದಲ್ಲಿನ ಡ್ರಗ್ ಮಾಫಿಯಾ ಆಧರಿತ ಸಿನಿಮಾ ಎನ್ನಲಾಗಿದ್ದು, ಸಿನಿಮಾ ಕುರಿತು ನಿರೀಕ್ಷೆಗಳು ಹೆಚ್ಚಿವೆ. 'ಟಾಕ್ಸಿಕ್; ಎ ಫೇರಿಟೇಲ್ ಫಾರ್ ಗ್ರೋನ್ ಅಪ್ಸ್' ಸಿನಿಮಾವನ್ನು ಗೀತು ಮೋಹನ್‌ದಾಸ್ ನಿರ್ದೇಶಿಸುತ್ತಿದ್ದು, ಆ್ಯಕ್ಷನ್ ಪ್ಯಾಕ್ಡ್ ಸಿನಿಮಾ ಇದಾಗಿದೆ. ಕಿಯಾರಾ ಅಡ್ವಾಣಿ, ನಯನತಾರಾ, ಹುಮಾ ಖುರೇಶಿ, ಶ್ರುತಿ ಹಾಸನ್ ಮುಂತಾದವರು ಪ್ರಮುಖ ಪಾತ್ರದಲ್ಲಿರಲಿದ್ದಾರೆ.

2025ರ ಏಪ್ರಿಲ್ ತಿಂಗಳಿನಲ್ಲಿ 'ಟಾಕ್ಸಿಕ್' ಬಿಡುಗಡೆಯಾಗಲಿದೆ. ಈ ನಡುವೆ ಕೆಜಿಎಫ್ 3 ಸಿನಿಮಾ ಕೂಡ ಹೊರಬರಲಿದೆ ಎಂಬುದನ್ನು ಹೊಂಬಾಳೆ ಫಿಲಂಸ್ ಖಾತ್ರಿಪಡಿಸಿದೆ. ಈ ಸಿನಿಮಾ ಚಿತ್ರೀಕರಣ 2025ರಲ್ಲಿ ಪ್ರಾರಂಭವಾಗಲಿದೆ. ಯಶ್ ಜೊತೆಗೆ ಈ ಸಿನಿಮಾದಲ್ಲಿ ಅಜಿತ್ ಕೂಡ ಇರಲಿದ್ದಾರೆ ಎನ್ನಲಾಗಿದೆ.

